ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 34-41
©*IIMRD*, Mysuru
www.iimrd.com

# ಲಂಬಾಣಿ ಸಮುದಾಯದ ಉಡುಗೆ–ತೊಡುಗೆಗಳ ವೈಶಿಷ್ಟ್ಯತೆ ಮತ್ತು ಸಾಂಸ್ಕೃತಿಕ ಆಚರಣೆಗಳು

**ವೀಣಾ ಎಲ್. ವೈ[*] ಮತ್ತು ಡಾ. ಎಸ್. ಬಿ. ರಾಠೋಡ [**]**

[*] ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
[**] ಮುಖ್ಯಸ್ಥರು ಕನ್ನಡ ವಿಭಾಗ, ಹಾಗೂ ಸಂಶೋಧನಾ ಮಾರ್ಗದರ್ಶಕರು (ಕನ್ನಡ.ವಿ.ವಿ), ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ

***ಸಾರಾಂಶ* (Abstract)**

*ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರವಾಗಿದ್ದು, ವಿವಿಧ ಧರ್ಮ, ಜಾತಿ, ಬುಡಕಟ್ಟು ಸಮುದಾಯಗಳು ಇಲ್ಲಿ ನೆಲೆಸಿವೆ. ಪ್ರತಿಯೊಂದು ಸಮುದಾಯಗಳ ಭೌತಿಕ ಮತ್ತು ಅಭೌತಿಕ ಸಂಸ್ಕೃತಿ ಪ್ರದೇಶದಿಂದ ಪ್ರದೇಶಕ್ಕೆ ಸಮುದಾಯದಿಂದ ಸಮುದಾಯಕ್ಕೆ ಭಿನ್ನತೆ ಮತ್ತು ಸಾಮ್ಯತೆ ಹೊಂದಿರುವುದನ್ನು ಕಾಣುತ್ತೇವೆ ಅಂತಹ ಅನೇಕ ಸಮುದಾಯಗಳಲ್ಲಿ ಲಂಬಾಣಿ ಸಮುದಾಯವು ಕೂಡ ಒಂದು. ಲಂಬಾಣಿ ಸಮುದಾಯವು ರಾಷ್ಟ್ರದ ವಿವಿಧ ರಾಜ್ಯಗಳಲ್ಲಿ ನೆಲೆಸಿದ್ದು ತಮ್ಮದೇಯಾದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಜಕೀಯ ವ್ಯವಸ್ಥೆಯೊಂದಿಗೆ ತಮ್ಮ ಅನನ್ಯತೆಯನ್ನುಳಿಸಿಕೊಂಡು ಬರುತ್ತಿದ್ದಾರೆ. ಪ್ರಸ್ತುತ ಲೇಖನದಲ್ಲಿ ಲಂಬಾಣಿ ಸಮುದಾಯದ ಉಡುಗೆ–ತೊಡುಗೆಗಳ ವಿಶಿಷ್ಟ್ಯತೆ ಮತ್ತು ಅವರ ಜೀವನಾವರ್ತಕ/ಸಾಂಸ್ಕೃತಿಕ ಆಚರಣೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ.*

***ಮುಖ್ಯ ಪದಗಳು* (Keywords):** ಲಂಬಾಣಿ, ಬಂಜಾರ, ಉಡುಗೆ–ತೊಡುಗೆ, ಸಾಂಸ್ಕೃತಿಕ ಆಚರಣೆಗಳು.

## ಪೀಠಿಕೆ

ಜಗತ್ತಿನ ಎಲ್ಲಾ ಸಾಂಸ್ಕೃತಿಕ ವಿದ್ವಾಂಸರು, ಸಂಶೋಧಕರು ಮತ್ತು ಅಧ್ಯಯನಕಾರರನ್ನು ಭಾರತದ ಬುಡಕಟ್ಟು ಸಂಸ್ಕೃತಿ ಆಕರ್ಷಿಸಿದೆ. ಅದರಲ್ಲೂ ಲಂಬಾಣಿ ಸಮುದಾಯದ ಉಡುಗೆ ತೊಡುಗೆಯು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದೆ. ಏಕೆಂದರೆ ಲಂಬಾಣಿ ಸಮುದಾಯದ ಉಡುಗೆ–ತೊಡುಗೆ ಜಗತ್ತಿನ ಇನ್ನಾವುದೇ ಸಮುದಾಯಗಳಲ್ಲೂ ಬಳಕೆಯಲ್ಲಿರದ ಕಲೆಗಳ ಆಗರ. ಲಂಬಾಣಿಗಳ ಉಡುಗೆ ತೊಡುಗೆಯನ್ನು ವಿವರಿಸಲು ಸಾವಿರಾರು ಪುಟಗಳು ಬೇಕಾಗುತ್ತವೆ. ಅದು ಕೇವಲ ಉಡುಗೆಯಾಗದೆ ಅಸಾಧಾರಣ ಕಲೆಯಾಗಿ, ಆ ಜನಾಂಗದ ಸ್ತ್ರೀಯರ ಪ್ರತಿಭೆಯ ಉತ್ತುಂಗವಾಗಿ, ಸೌಂದರ್ಯದ ಸಾಗರವಾಗಿ; ತಾಳ್ಮೆಯನ್ನು ನೈಪುಣ್ಯವನ್ನು ಕಲಾ ಪ್ರೌಢಿಮೆಯನ್ನು ಬಡತನವನ್ನು ಸವಾಲಿಗೊಡ್ಡಿ ರಚಿಸಿದ ಜೀವಂತ ಕೃತಿಗಳವು. ಲಂಬಾಣಿ ಸ್ತ್ರೀಯರನ್ನು ಇನ್ನಿಲ್ಲದಂತೆ ಚೆಲುವಿಯರನ್ನಾಗಿಸಿದ

*Please cite this article as: ವೀಣಾ ಎಲ್. ವೈ ; ಎಸ್.ಬಿ. ರಾಠೋಡ. (2021).* ಲಂಬಾಣಿ ಸಮುದಾಯದ ಉಡುಗೆ–ತೊಡುಗೆಗಳ ವೈಶಿಷ್ಟ್ಯತೆ ಮತ್ತು ಸಾಂಸ್ಕೃತಿಕ ಆಚರಣೆಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 34–41*

ಆ ಉಡುಗೆ ತೊಡುಗೆ ಕೇವಲ ಸೌಂದರ್ಯ ವರ್ಧಕ ವಸ್ತುವಾಗಿರದೆ, ಉಟ್ಟ ಸ್ತ್ರೀಯರೇ ಒಂದು ಅಸಾಧಾರಣ ಕಲಾಕೃತಿಯಂತೆ ಕಾಣುತ್ತಾರೆ. ಲಂಬಾಣಿಗಳ ಉಡುಗೆ ತೊಡುಗೆಗಳ ಸೃಷ್ಟಿಯ ಹಿಂದೆ ವೈಜ್ಞಾನಿಕ ಕಾರಣಗಳು, ದಂತ ಕತೆಗಳು, ಚಾರಿತ್ರಿಕ ಅಂಶಗಳು, ರಕ್ಷಣಾ ತಂತ್ರಗಾರಿಕೆ, ಆಭರಣಗಳೇ ಆಯುಧಗಳಾಗಿ ಬಳಕೆಯಾದ ಸಂಗತಿಗಳು ಹೀಗೆ ಅನೇಕ ವಿಚಾರಗಳನ್ನು ಎಡ್ಗರ್ ಥರ್ಸ್ಟನ್ ಸೇರಿದಂತೆ ಹಿಡಿದು ವಿದೇಶಿ ಚಿಂತಕರು ದೇಶೀಯ ಚಿಂತಕರು ಸಂಶೋಧಕರು ಬಹಳವಾಗಿ ಚರ್ಚಿಸಿದ್ದಾರೆ. ಕನ್ನಡದಲ್ಲಿ ಲಂಬಾಣಿ ಸಂಸ್ಕೃತಿಯ ಕುರಿತು ಲಂಬಾಣಿ ಸಮುದಾಯದ ಚಿಂತಕರೇ ನಾನಾ ಬಗೆಯ ಸಂಶೋಧನೆಗಳನ್ನು ನೆಡೆಸಿ ಹೊರತೆಗೆದಿರುವ ಅನೇಕ ಸಂಗತಿಗಳನ್ನು ಅವರ ಕೃತಿಗಳಲ್ಲಿ ಕಾಣುತ್ತೇವೆ.

**ಲಂಬಾಣಿ ಸಮುದಾಯದ ಕಸೂತಿ ಕಲೆಗಳು**

ಕಸೂತಿಯ ಮೂಲಕ ಅರಳಿದ ಲಂಬಾಣಿಗಳ ಆಕರ್ಷಕ ಉಡುಗೆ ತೊಡುಗೆಗಳು ಕಚ್ ಚಮ್ಮಾರರ ಕಸೂತಿ ಕಲೆ, ಹಾಗೂ ಬಲೂಚಿಸ್ಥಾನದ ಪ್ರಾದೇಶಿಕ ಉಡುಪಿನ ಪ್ರಭಾವದಿಂದಲೋ, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರಾದ ಮಹಿಳೆಯರ ಉಡುಪುಗಳ ಪ್ರೇರಣೆಯಿಂದಲೋ ಪರಿಷ್ಕೃತಗೊಂಡು ದೊಂಬರಾಟ ಆಡುವಾಗ ನೋಡುಗರನ್ನು ಆಕರ್ಷಿಸಲು ಅತ್ಯಂತ ನಾಜೂಕಿನಿಂದ ತಯಾರಿಸಲಾಗಿರಬಹುದಾದ ಸಾಧ್ಯತೆಯಿದ್ದು, ಆ ಕಾರಣಕ್ಕೇ ಬರಬರುತ್ತಾ ಅವು ಅತ್ಯಂಕ ಕಲಾತ್ಮಕವಾಗಿ ಅರಳಿದವು. ಹರಿಲಾಲ ಪವಾರರು ತಮ್ಮ "ಬದುಕೊಂದು ಚಿತ್ತಾರ ಲಂಬಾಣಿ ಬುಡಕಟ್ಟು" ಎಂಬ ಕೃತಿಯಲ್ಲಿ ಕೆಲವು ಐತಿಹ್ಯಗಳನ್ನು ಉಲ್ಲೇಖಿಸಿದ್ದಾರೆ. ಅದರ ಪ್ರಕಾರ, “ಯುದ್ದ ವೀರರಾದ ಲಂಬಾಣಿಗರ ಪೂರ್ವಜರಲ್ಲೊಬ್ಬನು ಯುದ್ಧಕ್ಕೆಂದು ಧಾವಿಸಿ ಹೋಗಿ ಹೋರಾಟದಲ್ಲಿ ಇದ್ದಕ್ಕಿದ್ದಂತೆ ಅಕಾಲ ಮೃತ್ಯುವನ್ನು ಹೊಂದಿದ ವಾರ್ತೆಯನ್ನು ತಿಳಿದು, ತನ್ನ ಪೋಷಾಕುಗಳನ್ನು ಕಲಾತ್ಮಕವಾಗಿ ಕಸೂತಿ ಕೆಲಸದಿಂದ ಸಿದ್ಧಪಡಿಸಿಕೊಳ್ಳುತ್ತಿದ್ದ ಅವನ ಸತಿ ‘ಚಿತೆ’ ಏರಿದ ಸಂಗತಿ ಅತ್ಯಂತ ರೋಮಾಂಚಕವಾಗಿದೆ. ಅನಾಗರಿಕತೆಯಿಂದ ನಾಗರಿಕತೆಯ ಹೊಸ್ತಿಲಲ್ಲಿ ಕಾಲಿಡುತ್ತಿರುವ ಆ ಸಮಯದಲ್ಲಿ ಈ ವೀರಶಿರೋಮಣಿಯು ಬಿಟ್ಟು ಹೋದ ಅಪೂರ್ಣ ಬಟ್ಟೆಗಳನ್ನು ಮುಂದಿನ ಪೀಳಿಗೆಯವರು ಕೈಗೆತ್ತಿಕೊಂಡು ಪೂರ್ಣ ಬಟ್ಟೆಗಳೆಂದೇ ಧರಿಸಿಕೊಂಡರು. ಕಾರಣ ಇಂದು ಲಂಬಾಣಿಗರು ಧರಿಸುವ ಲಂಗ (ಪೇಟಿಯಾ) ಹಾಗೂ ಕುಪ್ಪಸ (ಕಾಂಚಳಿ) ಇವೆರಡೂ ಅಪೂರ್ಣ ಬಟ್ಟೆಗಳಾಗಿರಲು ಸಾಧ್ಯವಿದೆ. ಏಕೆಂದರೆ ಲಂಗದ ಎಡಗಡೆ ಇಂದಿಗೂ ಕಾಲುಭಾಗ ಹೊಲಿಯದೆ ಹಾಗೆಯೇ ಬಿಟ್ಟಿರುತ್ತಾರೆ. ಕುಪ್ಪಸವು ಕೂಡ ಕೇವಲ ಎದೆ ಮುಚ್ಚುವ ಬೆನ್ನು ಸಂಪೂರ್ಣವಾಗಿ ಕಾಣುವ ಅಪೂರ್ಣ ಪೋಷಾಕು. ಇನ್ನು 'ಛಾಂಟಿಯಾ' ಎನ್ನುವ ಮೇಲ್ಹುಸುಕು ಪ್ರಾಯಶಃ ಮೊದ ಮೊದಲು ಇದ್ದಂತಿಲ್ಲ. ಮೇಲಿನ ಎರಡೂ ಅಪೂರ್ಣ ಪೋಷಾಕುಗಳನ್ನು ಮುಚ್ಚಿಕೊಂಡು ಅನಂತರದಲ್ಲಿ ಮಾಡಿಕೊಂಡರೆಂದು ಕಾಣಿಸುತ್ತದೆ." ಎಂದು ಹೇಳುತ್ತಾರೆ.

ಹರಿಲಾಲಪವಾರರವರೇ ಉಲ್ಲೇಖಿಸಿರುವ ಮತ್ತೊಂದು ದಂತಕಥೆಯ ಪ್ರಕಾರ "ಈಗಿರುವ ಹೈದರಾಬಾದ ನಗರ ಮೊದಲು ಭಾಗಾನಗರ ಅಥವಾ ಭಾಗ್ಯನಗರ ಎಂದು ಕರೆಯುತ್ತಿದ್ದರಂತೆ. ಹೈದರಾಬಾದ ರಾಜ್ಯವನ್ನು 1589 ರಲ್ಲಿ 'ಮಹಮ್ಮದ ಕೂಲಿ ಕುತಬ್ಶಾಹಿ' ಮನೆತನದ ವ್ಯಕ್ತಿ ಈತ ಗೋಲಕೊಂಡಾ ಕೋಟೆಯಲ್ಲಿ ಇದ್ದುಕೊಂಡು ಮೂಸಾನದಿ ದಂಡೆಯ ಆಚೆ ಈಚೆ ಹೈದರಾಬಾದ

ರಾಜ್ಯವನ್ನು ಸ್ಥಾಪಿಸಿ ಆಳಿದ. 'ಮಹಮ್ಮದ ಕೂಲಿ ಕುತುಬ್ಷಾಹಿ' ಲಂಬಾಣಿ ಯುವತಿಯಾದ ಭಾಗಾಮತಿಯ ನಿರಾಡಂಬರ ಸೌಂದರ್ಯಕ್ಕೆ ಮನಸೋತು ಅವಳನ್ನು ಮದುವೆ ಆಗಿ ಅವಳ ಮೇಲಿನ ತನ್ನ ವಿಶೇಷ ಮಮತೆಯನ್ನು ತೋರಿಸುವುದಕ್ಕಾಗಿ, ತನ್ನ ರಾಜ್ಯದ ರಾಜಧಾನಿಗೆ ಭಾಗ್ಯನಗರ ಎಂದು ಕರೆದನಂತೆ. ಹೈದರಾಬಾದ ಎನ್ನುವ ಹೆಸರು ಬರುವುದಕ್ಕೆ ಮೊದಲು ಈ ನಗರಕ್ಕೆ ಭಾಗ್ಯನಗರ ಎಂದು ಕರೆಯುತ್ತಿದ್ದರಂತೆ. ಹೈದರಾಬಾದ ನಗರದ ಸುತ್ತಮುತ್ತಲೂ 'ಬಂಜಾರಾ ಹಿಲ್' ಎನ್ನುವ ಬೆಟ್ಟ ಪ್ರದೇಶವೇ ಇದೆ. ಒಂದು ಕಾಲಕ್ಕೆ ಅಲ್ಲಿ ಕೇವಲ ಬಂಜಾರ ಸಮುದಾಯದವರು ಮಾತ್ರ ವಾಸಿಸುತ್ತಿದ್ದರಂತೆ. ದೇವೇಂದ್ರಕುಮಾರ್ ಹಕಾರಿಯವರು ನೀಡಿದ ಮಾಹಿತಿ ಅನ್ವಯ ಈ ಐತಿಹ್ಯವನ್ನು ದಾಖಲಿಸುವ ಡಾ. ಹರಿಲಾಲ ಪವಾರರು "ಲಂಬಾಣಿ ಹೆಂಗಸರ ಉಡುಗೆ ತೊಡಿಗೆಗಳು ಇಷ್ಟೊಂದು ಆಕರ್ಷಣೀಯ ಮತ್ತು ಸಮೃದ್ಧವಾಗಿರಲು ಬಹುಷಃ ಮುಸ್ಲಿಮ್ ದೊರೆಗಳ ಬಂದದ್ದೆ ಕಾರಣವಾಗಿರಬಹುದು. ಹೀಗಾಗಿ ಮೊದಲೇ ರಮ್ಯದಿಂದ ಇದ್ದ ಹೆಂಗಸರು ತಾವು ಮತ್ತಷ್ಟು ಚಿತ್ತಾಕರ್ಷಕರಾಗಿ ಕಾಣಬೇಕೆಂದು ಉಡುಗೆ ತೊಡುಗೆಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದಂತೆ ತೋರುತ್ತದೆ" ಎಂದಿದ್ದಾರೆ. ಈ ಐತಿಹ್ಯವನ್ನಾಗಲೀ ಹೇಳಿಕೆಯನ್ನಾಗಲೀ ನನ್ನ ಈ ಲೇಖನದಲ್ಲಿ ಮರುಪರಿಶೀಲಿಸಲಾಗಿದೆ. ಮಹಮದ್ ಖುಲಿ ಕುತುಬ್ ಷಹ ಒಬ್ಬ ಅತ್ಯುತ್ತಮ ಗಜಲ್ ಕವಿ, ಆತನ ಕಾಲ ಹದಿನಾರನೇ ಶತಮಾನ, ಆತನು ಬಂಜಾರಾ  ಭಾಗಾವತಿಯನ್ನು ಮದುವೆಯಾಗಿರಬಹುದು ಬಂಜಾರ ಹಿಲ್ ಇರುವಂತೆ ಆತನ ಕೋಟೆಯ ಎಂಟು ದ್ವಾರ ಬಾಗಿಲುಗಳಲ್ಲಿ 'ಬಂಜಾರಾ ಬಾಗಿಲು' ಸಹಾ ಒಂದು. ಆದರೆ ಮುಸ್ಲಿಮ್ ದೊರೆಗಳನ್ನು ಮೆಚ್ಚಿಸಲೆಂದೇ ಬಂಜಾರಾ ಸ್ತ್ರೀಯರು ತಮ್ಮ ಉಡುಪುಗಳನ್ನು ಚಿತ್ತಾಕರ್ಷಕಗೊಳಿಸಿಕೊಂಡರೆಂಬುದನ್ನು ಒಪ್ಪಲಾಗದು. ಕ್ರಿ.ಶ ಹದಿಮೂರನೇ ಶತಮಾನದಲ್ಲಿ ಅಂದರೆ ಕುಲಿ ಕುತುಬ್ ಷಹಾನಿಗಿಂತ ಸುಮಾರು ಮುನ್ನೂರು ವರ್ಷಗಳ ಮೊದಲೇ ಭಾರತಕ್ಕೆ ಬೇಟಿ ನೀಡಿದ್ದ ಇಟಲಿಯ ಭೂ ಶೋಧಕ ಮಾರ್ಕೊಪೋಲೋ "ಲಂಬಾಣಿ ಸ್ತ್ರೀಯರ ಉಡುಗೆ ತೊಡುಗೆಗಳು ಕಸೂತಿಯ ಕೌಶಲ್ಯಕ್ಕೆ ಸರಿಸಾಟಿಯಾಗುವಂತದ್ದು ವಿಶ್ವದಲ್ಲೇ ಇಲ್ಲ" ಎಂದಿದ್ದಾನೆ.  ಈ ಹೇಳಿಕೆಯನ್ನು ಪರಿಶೀಲಿಸಿದರೆ ಹರಿಲಾಲ ಪವಾರರು ಕೊಡುವ ಐತಿಹ್ಯವನ್ನು ವಿಮರ್ಶೆಗೆ ಒಡ್ಡಲಾಗಿದೆ. ಸಣ್ಣರಾಮ ಅವರು ತಮ್ಮ ಲಂಬಾಣಿ ಸಂಸ್ಕೃತಿ ಕೃತಿಯಲ್ಲಿ ಉಡುತೊಡುಗೆಗಳ ಉಗಮ ವಿಕಾಸದ ಹಿನ್ನೆಲೆಯ ಕುರಿತು ಮತ್ತೊಂದು ಐತಿಹ್ಯ ಕೊಡುತ್ತಾರೆ. ಅದು ಹೀಗಿದೆ, ಲಂಬಾಣಿಗಳ "ಮೂಲಪುರುಷ ದಾದಾಮೋಲ ಮತ್ತು ರಾಧಿದಾದಿಯರು ದೊಂಬರಾಟವನ್ನಾಡುತ್ತ ರಾಜಸ್ಥಾನ, ಮತ್ತು ಮಹಾರಾಷ್ಟಗಳಲ್ಲಿ  ಸಂಚರಿಸುತ್ತಿರುತ್ತಾರೆ. ಹೀಗೆ ಸಂಚರಿಸುತ್ತ ಮಹಾರಾಷ್ಟದ ಒಂದು ಸ್ಮಾಶಾನಕ್ಕೆ ಬಂದಾಗ ಅಲ್ಲಿ ಒಂದು ಹುಡುಗಿಯನ್ನು ಹೂಳಿರುತ್ತಾರೆ. ರಾಧಿದಾದಿಯು ತನ್ನಲ್ಲಿರುವ ಅಪಾರ ಮಂತ್ರಶಕ್ತಿಯಿಂದ ಮರಣಿಸಿದ್ದ  ಹುಡುಗಿಯನ್ನು ಬದುಕಿಸುತ್ತಾಳೆ. ಬೆತ್ತಲಿದ್ದ ಆ ಹುಡುಗಿಗೆ ತನ್ನ ಮೇಲುಹೊದಿಕೆಯನ್ನು ಹರಿದು ಎರಡು ತುಂಡು ಮಾಡಿ ಒಂದು ತುಂಡು  ಸೊಂಟಕ್ಕೆ ಸುತ್ತಲು ಮತ್ತೊಂದು ತುಂಡು ಎದೆಗೆ ಕಟ್ಟಿಕೊಳ್ಳಲು ಕೊಡುತ್ತಾಳೆ. ಆ ಎರಡು ತುಂಡು  ಬಟ್ಟೆಗಳೇ ಲಂಬಾಣಿ ಸ್ತ್ರೀಯರು  ಧರಿಸುವ ಬಟ್ಟೆಗಳ ಮೂಲಗಳಾಗಿವೆ". ಎನ್ನುವ ಈ  ಐತಿಹ್ಯ ಹೆಚ್ಚಿನ ಮಾಹಿತಿ ಕೊಡುವುದಿಲ್ಲ ಎಂದಿದ್ದಾರೆ.

ಆದರೆ ಲಂಬಾಣಿ ಮಹಿಳೆಯರ ಉಡುಪುಗಳ ಮೇಲೆ ಉತ್ತರ ಭಾರತದ ರಾಜಸ್ಥಾನ, ಗುಜರಾತ್ ಮತ್ತು ಮಹಾರಾಷ್ಟಾದ ಮಹಿಳೆಯರ ಉಡುಪುಗಳ ಪ್ರಭಾವವಿರುವ ಸುಳಿವನ್ನು ಇದು ಬಿಟ್ಟುಕೊಡುತ್ತದೆ. ಈ

ಐತಿಹ್ಯಗಳಾಚೆಗೆ ಈ ಉಡುಗೆ ತೊಡುಗೆಗಳ ಕುರಿತಾಗಿ ಕಲಾತ್ಮಕ ದೃಷ್ಟಿಯಾಚೆಗೆ ರಕ್ಷಣಾತ್ಮಕ ಸಂಗತಿಗಳ ಕುರಿತೂ ಅನೇಕರು ವಿಶ್ಲೇಷಿಸಿದ್ದಾರೆ. ರಾಜಸ್ಥಾನದ ಮರಳುಗಾಡು ಇತರೇ ಬಯಲು ಪ್ರದೇಶಗಳ ವಿಪರೀತ ಬಿಸಿಲಿನಲ್ಲಿ ಮಕ್ಕಳನ್ನು ಬಗಲಿಗೆ ಕಟ್ಟಿಕೊಂಡು ಶ್ರಮದಾಯಕ ಕೆಲಸವನ್ನು ಮಾಡುವಾಗ ಬಿಸಿಲು ತಾಕದಿರಲೆಂದು ತಮ್ಮ ಉಡುಗೆಗೆ ಕಾಜಿನ ಬಿಲ್ಲೆಗಳನ್ನು ಹೆಚ್ಚಾಗಿ ಉಪಯೋಗಿಸಿರಬಹುದು. ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ ಕಾಜಿನ ಬಿಲ್ಲೆಯಿಂದ ಸೂರ್ಯನ ಸುಡುವ ಕಿರಣಗಳು ನೇರವಾಗಿ ಮೈಗೆ ತಾಗದೆ ಮರು ಪ್ರತಿಫಲನಗೊಳ್ಳುತ್ತವೆ. ಇದೂ ಒಂದು ಕಾರಣವಿರಬಹುದು ಎಂಬುದನ್ನು ಹಾಗೂ ಹರಿಲಾಲ ಪವಾರರೇ ಉಲ್ಲೇಖಿಸಿರುವ 'ಕಾಡುಪ್ರಾಣಿಗಳಿಂದ ಕಳ್ಳಕಾಕರಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಈ ಉಡುಪುಗಳು ಅವಶ್ಯಕವಾಗಿದ್ದವು. ಕಾಜಿನ ಬಿಲ್ಲೆಗಳನ್ನು ತಮ್ಮ ಮೇಲೆ ಎರಗಲು ಬರುವ ಹಿಂಸ ಮೃಗಗಳಾದ ಹುಲಿ, ಸಿಂಹ, ಚಿರತೆ, ತೋಳ ಮೊದಲಾದ ಜೀವಿಗಳು ಕಾಜಿನ ಬಿಲ್ಲೆಯ ಪ್ರತಿಫಲನಕ್ಕೆ ಹೆದರಿ ಭಯದಿಂದ ಓಡಿಹೋಗುತ್ತವೆನ್ನುವ ಕಾರಣದಿಂದ ಗಾಜಿನ ಬಿಲ್ಲೆಗಳನ್ನು ತಮ್ಮ ಉಡುಗೆಗಳ ಮೇಲೆ ಹಾಕಿಕೊಳ್ಳುತ್ತಿದ್ದರೆಂಬುದೂ ಒಪ್ಪಬಹುದಾದ ವಿಚಾರವಾಗಿದೆ. ಬಿ. ಟಿ. ಲಲಿತಾ ನಾಯಕ್ ತಮ್ಮ 'ಬಂಜಾರರ ಜಾಡು ಹಿಡಿದು' ಎಂಬ ಸಂಶೋಧನಾ ಕೃತಿಯಲ್ಲಿ ಲಂಬಾಣಿ ಸ್ತ್ರೀಯರು ಧರಿಸುವ ಆಭರಣವೇ ಆಯುಧ ಎನ್ನುತ್ತಾರೆ. "ಬಂಜಾರಾ ಮಹಿಳೆಯರು ಅರಣ್ಯದಲ್ಲಿ ಬಂದೆರಗಬಹುದಾದ ಪ್ರಾಣಿಗಳಿಂದ ಪಾರಾಗಲು ತಮ್ಮ ದೇಹದ ಎಲ್ಲಾ ಅಂಗಾಂಗಗಳಿಗೂ ಒಂದಲ್ಲ ಒಂದು ತೆರನಾದ ಉಡುಪಿನ–ಆಭರಣದ ಕವಚ ತೊಟ್ಟು ಅಲಂಕರಿಸಿಕೊಂಡರು. ತಮ್ಮ ಉಡುಪನ್ನು ತಾವೇ ಹೊಲಿದು ಸಿದ್ದಪಡಿಸಿಕೊಂಡರು. ತಾವು ಉಡುವ ಬಟ್ಟೆ ತೊಡುವ ಆಭರಣಗಳು ಕೇವಲ ಅಲಂಕಾರಕ್ಕಾಗಿ, ಮಾನರಕ್ಷಣೆಗಾಗಿ ಅಷ್ಟೇ ಅಲ್ಲದೆ ಮೃಗಗಳ ದಾಳಿಯಿಂದ ರಕ್ಷಣೆ ಪಡೆಯುವ ಸಾಧನಗಳೂ ಆದವು". ಈ ಹೇಳಿಕೆಯ ಹಿನ್ನೆಲೆಯನ್ನು ಗಮನಿಸಿದಾಗ ಬಿ. ಟಿ. ಲಲಿತಾ ನಾಯಕ್ ಮತ್ತು ಹರಿಲಾಲ ಪವಾರರ ಹೇಳಿಕೆಗಳಲ್ಲಿ ಸಾಮ್ಯತೆಯಿದೆ ಸತ್ಯಾಂಶವಿದೆ ಎನಿಸುತ್ತದೆ.

ದೇಹದ ಅಂಗಾಗಗಳನ್ನು ಮುಚ್ಚಿಕೊಳ್ಳುವ ಸಾಧನವಾಗಿ ಬಳಕೆಗೆ ಬಂದ ವಸ್ತ್ರ ಉಡುವ ರೂಢಿ ಬರಬರುತ್ತಾ ಅದು ಮಾನರಕ್ಷಣೆಯ ಜೀವರಕ್ಷಣೆಯ ಸಾಧನವೂ ಆಗಿ, ಕಲೆಯಾಗಿ ಸೌಂದರ್ಯೋಪಾಸನೆಯ ಸಾಧನವಾಗಿ, ಅನೇಕ ಜನಾಂಗಗಳಲ್ಲಿ ವಿಕಾಸ ಹೊಂದಿದೆ. ಲಂಬಾಣಿಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸದಾ ಕಾಲ ಪಯಣಿಸಬೇಕಾಗಿತ್ತು. ಕಾಡು ಮೇಡಿನ ದುರ್ಗಮ ಹಾದಿಗಳನ್ನು ಕ್ರಮಿಸಬೇಕಾಗಿತ್ತು. ಪಟ್ಟಣದ ದರ್ಜಿಗಳ ಬಳಿ ಅವರು ಬಟ್ಟೆ ಹೊಲೆಸುವ ಅವಕಾಶಗಳಿರಲಿಲ್ಲ. ಕಷ್ಟದ ಜೀವನ ಅವರದ್ದಾಗಿದ್ದರಿಂದ ಅವರೇ ಗಟ್ಟಿಮುಟ್ಟಾದ ಉಡುಪುಗಳ ತಯಾರಿಕೆಗೆ ತೊಡಗಿಕೊಂಡರೆಂಬ ಸಾಧ್ಯತೆ. ಇನ್ನು ಈ ಐತಿಹಾಸಿಕ ದಂತಕತೆ ಜೀವ ರಕ್ಷಣೆಯ ಉದ್ದೇಶಗಳಾಚೆ ಜಗತ್ತಿನ ಉತ್ಕೃಷ್ಟ ಕಲೆಯಾಗಿ ಲಂಬಾಣಿ ಸ್ತ್ರೀಯರು ತಮ್ಮ ಉಡುಪನ್ನು ರೂಪಿಸಿ ಬಿಟ್ಟಿದ್ದಾರೆ ಅದು ಅವರಿಗೇ ಗೊತ್ತಿಲ್ಲ. ಅವರಿಗೆ ಆ ಉದ್ದೇಶವೇ ಇರಲಿಲ್ಲ ಅವರ ಆತ್ಮಸಂತೋಷಕ್ಕೆ ಸೌಂದರ್ಯ ಪ್ರದರ್ಶನಕ್ಕೆ ಮಾನರಕ್ಷಣೆಗೆ ತನ್ನ ಸಂಗಾತಿಯನ್ನು ಆಕರ್ಷಿಸುವುದಕ್ಕೆ ರೂಪಿಸಿಕೊಂಡ ರಂಗುರಂಗಿನ ಉಡುಪುಗಳು ಜಗತ್ತಿನ ಗಮನ ಸೆಳೆದಿರುವುದು ವಿಶೇಷ. ಲಂಬಾಣಿ ಸ್ತ್ರೀಯರ ಉಡುಪು ಕೇವಲ ಒಂದು ಉಡುಪಲ್ಲ. ಅದು ಅನೇಕ ಭಾಗಗಳಿಂದ ಏಕತ್ರಗೊಂಡ ಶ್ರೀಮಂತ ಉಡುಪು. ಬಹುಷಃ ಬೇರಾವುದೇ ಜನಾಂಗದ ಉಡುಗೆ ತೊಡುಗೆಗಳಲ್ಲಿ ಈ ಪರಿಯ ವೈವಿಧ್ಯತೆ ಇರಲಾರದು. ಕಾಂಚಳಿ (ಕುಪ್ಪಸ) ಪೇಟಿಯಾ

(ಲಂಗ)ಗಳು ವಸ್ತ್ರದ ಮುಖ್ಯ ಭಾಗಗಳು ಇವು ಚಿತ್ತಾಕರ್ಷಕವಾದ ಅಂಗಗಳಿಂದ ಅಥವಾ ವಿಭಾಗಗಳಿಂದ ಕೂಡಿರುತ್ತವೆ. ಕಾಂಚಳಿ ಮತ್ತು ಪೇಟಿಯಾಗಳು ಪರಿಪೂರ್ಣತೆ ಪಡೆಯಬೇಕಾದರೆ ಹಲವಾರು ಭಾಗಗಳು ಅದರಲ್ಲಿ ಇರಲೇಬೇಕು. ಆಗಲೇ ಅವು ಉಡುವ ಅರ್ಹತೆಯನ್ನು ಪಡೆಯುತ್ತವೆ. ಇಲ್ಲವಾದರೆ ಕಾಂಚಳಿ ಪೇಟಿಯಾಗಳಿಗೆ ಅರ್ಥವೇ ಇಲ್ಲ. ಅದೊಂದು ಸಾಧಾರರಣ ವಸ್ತ್ರವಾಗಿ ಲಂಬಾಣಿ ಸಂಸ್ಕೃತಿಗೊಂದು ವೈಶಿಷ್ಟತೆಯನ್ನು ತಂದುಕೊಡುತ್ತಿರಲಿಲ್ಲ. ಹಾಗಾಗಿಯೇ ಲಂಬಾಣಿ ಸ್ತ್ರೀಯರ ಈ ಉಡುಗೆ ತೊಡುಗೆಗಳು ಸಾಮಾನ್ಯತೆಯ ಆಚೆ ಅಸಾಮಾನ್ಯ ಸಾಂಸ್ಕೃತಿಕ ಸತ್ವವನ್ನು ಹೊಂದಿವೆ. ಇದೆಲ್ಲಾ ಇದ್ದೂ ಲಂಬಾಣಿಗಳ ವಸ್ತ್ರ ಅಪರಿಪೂರ್ಣವಾದ ರಚನೆ ಎಂದು ಕೆಲವು ಐತಿಹ್ಯಗಳ ಆಧಾರದ ಮೇಲೆ ಹೇಳಲಾಗುತ್ತದೆ. ಈ ಸುಂದರ ಧರಿಸಿನ ಹಿಂದೊಂದು ಹೆಣ್ಣಿನ ಧಾರುಣ ನೋವಿನ ಕತೆಯಿದೆ ಎಂಬುದನ್ನು ಲಂಬಾಣಿಗಳ ಕಲಾ ಜಗತ್ತಿನಲ್ಲಿ ಮಹಿಳೆಯೇ ಅಗ್ರಗಣ್ಯಳೆಂದು ಕಲೆಯ ವಿಚಾರದಲ್ಲಿ ಲಂಬಾಣಿ ಸಂಸ್ಕೃತಿಯನ್ನು ಅವಳೇ ಸಮೃದ್ಧಗೊಳಿಸಿರುವವಳೆಂದೂ ಹೇಳಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಬಿ. ಟಿ ಲಲಿತಾನಾಯಕ್ ರವರು ಲಂಬಾಣಿ ಉಡುಗೆ ತೊಡುಗೆ ಜಾನಪದ ಸಾಹಿತ್ಯಗಳನ್ನು ಅವಲೋಕಿಸಿದ್ದಾರೆ ಅವರದು ಹೆಣ್ಣೋಟದ ಕ್ರಮದ ಅಧ್ಯಯನವಾಗಿದೆ. ಅದನ್ನು ನಾನು ಈ ಲೇಖನದಲ್ಲಿ ಅಳವಡಿಸಿಕೊಂಡಿದ್ದೇನೆ. ವಸ್ತ್ರಗಳ ಕುರಿತಾಗಿ ಅವುಗಳ ವೈವಿಧ್ಯತೆ ವಿಶಿಷ್ಟತೆಗಳ ಕುರಿತಾಗಿ ಕನ್ನಡದ ಎಲ್ಲಾ ಲಂಬಾಣಿ ಸಂಶೋಧಕರು ಕಟ್ಟಿಕೊಡುವ ದಾಖಲಿಸುವ ವಿವರಗಳನ್ನು ಪರಿಶೀಲಿಸಿ ಅವುಗಳ ಕಲಾತ್ಮಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಧಾರ್ಮಿಕ ಸಂಗತಿಗಳನ್ನು ತಕ್ಕಮಟ್ಟಿಗೆ ವಿವರಿಸಿಲಾಗಿದೆ. ಡಾ. ಸಣ್ಣರಾಮ, ಡಾ. ಹರಿಲಾಲ ಪವಾರ್, ಡಾ. ಪಂಡಿತ ರಾಠೋಡ, ಉಡುಗೆ ತೊಡುಗೆಗಳ ಸಾಂಸ್ಕೃತಿಕ ಚಾರಿತ್ರಿಕ ವೈಜ್ಞಾನಿಕ ಸಾಮಾಜಿಕ ಹಿನ್ನೆಲೆಗಳನ್ನು ಹೆಕ್ಕಿ ತೆಗೆದು ತುಂಬಾ ವಿಸ್ತಾರವಾಗಿ ವಿವರವಾಗಿ ನಿರೂಪಿಸಿರುವುದನ್ನು ಪರಿಶೀಲಿಸಿದ್ದೇನೆ. ಉಡಿಗೆ–ತೊಡಿಗೆ ಕೇವಲ ಕಲೆಯಾಗಿರದೆ ಅದು ಅವರ ಜೀವನದ ಒಂದು ಭಾಗವಾಗಿ ಅವರ ಅವಸ್ಥೆಗಳ ಸಾಕ್ಷಿಯಾಗಿ ಹೇಗೆ ಪರಿಣಾಮ ಬೀರಿವೆ, ಅವರು ಧರಿಸುವ ನಾನಾ ವಿನ್ಯಾಸದ ನಾನಾ ಬಗೆಯ ಆಭರಣಗಳು ಧರಿಸುವ ಕ್ರಮ ಕಾರಣ ವೈಶಿಷ್ಟ ವೈವಿಧ್ಯತೆಗಳನ್ನು ಹಾಗೂ ಬುಡಕಟ್ಟಿನ ಸಂಪ್ರದಾಯ ವಿಧಿ ವಿಧಾನಗಳಲ್ಲಿ ವಯಸ್ಸು ಮತ್ತು ಬಾಲ್ಯ ವಿಧವಾ ವಿವಿಧ ಅವಸ್ಥೆಗಳಲ್ಲಿ ಅವುಗಳನ್ನು ಧರಿಸಲು ಇರುವ ಅವಕಾಶ ನಿಷೇಧಗಳನ್ನು ಕುರಿತು ಸ್ಥೂಲ ನೋಟ ಬೀರಲಾಗಿದೆ. ಕಸೂತಿ ಉಡುಗೆಗಳ ಅಲಂಕಾರ ಎಲ್ಲವೂ ಲಂಬಾಣಿ ಹೆಣ್ಣುಗಳ ಅನನ್ಯತೆಯ ಸಂಕೇತ. ಆದರೆ ಗಂಡ ಸತ್ತಮೇಲೆ ಕೆಲವು ಆಭರಣ ಉಡುಪಿನ ಬಗೆಗಿರುವ ಕೆಲವು ನಿರ್ಬಂಧಗಳು ಮೊದಲಾದವುಗಳ ಹಿಂದೆ ಮತ್ತೆ ಪುರುಷ ಪಾರಮ್ಯವೇ ಬಂದು ಕೂತಿರುವುದನ್ನು, ಸ್ತ್ರೀಯರಿಗೆ ಪ್ರಾಮುಖ್ಯತೆ ಸ್ವಾತಂತ್ರವಿದ್ದಾಗಲೂ ಪುರುಷ ವ್ಯವಸ್ಥೆಯು ಆಕೆಯನ್ನು ನಿಯಂತ್ರಿಸಿರುವುದನ್ನು ಇಲ್ಲಿ ನೋಡಬಹುದು.

**ಲಂಬಾಣಿ ಸಮುದಾಯದ ಆಚರಣೆಗಳು**

ಹುಟ್ಟಿನಿಂದ ಸಾಯುವವರೆಗೂ ಮನುಷ್ಯ ರೂಢಿಸಿಕೊಂಡಿರುವ ಆಚರಣೆಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತವೆ. ಪ್ರತಿಯೊಂದು ಸಮುದಾಯದಲ್ಲೂ ಜನನ ಸಂಸ್ಕಾರ, ಶವಸಂಸ್ಕಾರ, ಮರಣಸಂಸ್ಕಾರ, ಮದುವೆ, ಹಬ್ಬಗಳು ಜಾತ್ರೆಗಳು, ಹೀಗೆ ಮೊದಲಾದ ವಿಧಿ ಆಚರಣೆಗಳನ್ನು ಶಾಸ್ತ್ರಬದ್ಧವಾಗಿ ರೂಢಿಯಲ್ಲಿರುತ್ತವೆ. ನಾಗರಿಕ ಎನಿಸಿಕೊಂಡ ಶಿಷ್ಟ ಜನಾಂಗಗಳಿಗೆ ಎಷ್ಟೇ ಸ್ವತಂತ್ರ ಅಥವಾ ಪ್ರತ್ಯೇಕ ಸಂಸ್ಕೃತಿ ಹಿನ್ನೆಲೆಯಿದ್ದರೂ ಅವೆಲ್ಲವೂ ಸನಾತನ ವೈದಿಕ ಧರ್ಮದ ಆಚರಣೆಗಳ ಪ್ರಭಾವಕ್ಕೆ

ಒಳಗಾಗದೇ ಉಳಿದಿಲ್ಲ. ಆದರೆ ಈಗಲೂ ಆಚರಣೆಗಳಲ್ಲಿ ಸ್ವಂತಿಕೆ ಉಳಿಸಿಕೊಂಡಿರುವುದು ಬುಡಕಟ್ಟುಗಳು. ಈ ಹಿನ್ನೆಲೆಯಲ್ಲಿ ಲಂಬಾಣಿಗರು ತಮ್ಮದೆ ಆದ ಸಮಾಜಿಕ ಪದ್ದತಿ ಮತ್ತು ಆಚರಣೆಗಳನ್ನು ಹೊಂದಿರುವುದನ್ನು ಸಂಶೋಧಕರು ಕಟ್ಟಿಕೊಡುತ್ತಾರೆ. ಜನನ ಸಂಸ್ಕಾರದಿಂದ ಹಿಡಿದು ಮರಣ ಸಂಸ್ಕಾರದವರೆಗೆ ಲಂಬಾಣಿಗರು ಆಚರಿಸುವ ವಿಧಿವಿಧಾನಗಳು ಇತರೆ ಸಮುದಾಯಗಳಿಂತ ಭಿನ್ನತೆಯನ್ನು ಉಳಿಸಿಕೊಂಡು ಬಂದಿದೆ. ಬೇರೆ ಸಮಾಜದ ಇತರ ಜಾತಿಯ ಜನರಲ್ಲಿ ಗರ್ಭಿಣಿಯರಿಗಾಗಿ ನಡೆಯುವ ಸೀಮಂತ ಶಾಸ್ತ್ರಗಳು ಈ ಜನರಲ್ಲಿ ಇಲ್ಲ. ಲಂಬಾಣಿಗಳು ಜನನ ಮರಣಗಳಿಗೆ ಸಂಬಂಧಿಸಿದಂತೆ ಮಡಿ, ಮೈಲಿಗೆಯನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ. ಹೆರಿಗೆಯನ್ನು ಅನುಭವಿ ಹೆಂಗಸರು ಮನೆಯಲ್ಲಿಯೇ ಮಾಡಿಸುತ್ತಾರೆ. ಹೆರಿಗೆಗೆ ಹೆಣ್ಣನ್ನು ತವರು ಮನೆಗೆ ಕಳುಹಿಸುವ ಪದ್ಧತಿ ಇಲ್ಲ.

**ಮದುವೆ ಪದ್ಧತಿ**

ಇತರೆ ಸಮುದಾಯಕ್ಕೆ ಹೋಲಿಸಿದರೆ ಲಂಬಾಣಿ ಸಮುದಾಯದಲ್ಲಿ ಮದುವೆ ತೀರ ಭಿನ್ನವಾಗಿರುವುದನ್ನು ಕಾಣಬಹುದು. ಲಂಬಾಣಿಗರಲ್ಲಿ ಸಗೊತ್ರ ಮದುವೆ ನಿಷಿದ್ದ. ಭುಕ್ಯ ಮತ್ತು ಜಾತ್ ಗೋತ್ರಗಳ ನಡುವೆ ಸಂಬಂಧ ನಡೆಯುತ್ತವೆ. ಜಾತ್ ಮತ್ತು ಭುಕ್ಯ ಗೋತ್ರದವರು ತಮ್ಮ ಒಳಗೋತ್ರಗಳೊಂದಿಗೆ ವಿವಾಹ ಸಂಬಂಧ ಬೆಳೆಸುವುದಿಲ್ಲ. ಲಂಬಾಣಿಗರಲ್ಲಿ ಮದುವೆ ಮುಖ್ಯವಾಗಿ ನಾಲ್ಕು ಹಂತಗಳಲ್ಲಿ ನಡೆಯುತ್ತದೆ ವಾತ್ ಬೋಲಿ, ಸಗಾಯಿ, ಗೋಳ್ ಪಾಣಿ, ವಾಯ (ಮಾತುಕತೆ, ನಿಶ್ಚಯ, ವೀಳ್ಯೆ ಶಾಸ್ತ್ರ, ಮದುವೆ)

**ಹವೇಲಿ ಶಾಸ್ತ್ರ**

ಇದು ಇತರೆ ಯಾವುದೆ ಸಮುದಾಯದಲ್ಲಿ ಕಾಣ ಸಿಗದ ವಿಶಿಷ್ಟ ಆಚರಣೆ ಇದಾಗಿದೆ. ಮದುವೆ ಶಾಸ್ತ್ರಗಳೆಲ್ಲ ಮುಗಿದು ಮದಮಗಳನ್ನು ಬೀಳ್ಕೊಡುವ ಕೊನೆಯ ಘಳಿಗೆಯಲ್ಲಿ ಅವಳು ಸೂರ್ಯಾಭಿಮುಖವಾಗಿ ನಿಂತು ಹಾಡುವ ಒಂದು ಪ್ರಾರ್ಥನಾ ಗೀತೆಯಾಗಿದೆ. ಇದು ಅಳುವ ಧಾಟಿಯಲ್ಲಿದ್ದು ಮದುವೆ ಹೆಣ್ಣು ತಾನು ಹುಟ್ಟಿ ಬೆಳೆದ ಕುಟುಂಬ, ಊರು, ಪರಿಸರ ಗೆಳೆತಿಯರನ್ನು ಕುರಿತು ಹಾಡುತ್ತಾ ಅಳುವುದಾಗಿದೆ. ಲಂಬಾಣಿಗ ಸಮುದಾಯದಲ್ಲಿ ಉತ್ತಮ ಸಂಪ್ರದಾಯ ಮತ್ತು ಪದ್ದತಿಗಳು ಆಚರಣೆಯಲ್ಲಿವೆ. ಅವುಗಳಲ್ಲಿ ವಿಧವಾ ವಿವಾಹ ಈ ಸಮಾಜದಲ್ಲಿ ಇಂದಿಗೂ ರೂಢಿಯಲ್ಲಿವೆ.

**ಶವ ಸಂಸ್ಕಾರ**

ಲಂಬಾಣಿಗರಲ್ಲಿ ಶವ ಹೂಳುವ ಮತ್ತು ಸುಡುವ ಎರಡು ಪದ್ದತಿಗಳು ಆಚರಣೆಯಲ್ಲಿವೆ. ತಾಂಡಗಳಲ್ಲಿ ಮರಣಿಸಿದ ದಿನದಂದೆ ಮರಣಿಸಿದ ವ್ಯಕ್ತಿಯ ಸಂಬಂಧಿಕರು ಕುರಿಯನ್ನು ಬಲಿಕೊಟ್ಟು ತಿಥಿಯನ್ನು ಮಾಡುತ್ತಾರೆ. ವ್ಯಕ್ತಿ ಮರಣಿಸಿದ ದಿನವೇ ಪ್ರಾಣಿಬಲಿ ಕೊಡುವುದು ಬಹುಷಃ ಹಿಂದಿನ ಕಾಲದ ಜನರು ತಮ್ಮ ಊರಿಗೆ ಪಯಣ ಬೆಳೆಸಲು ಸೂಕ್ತ ಸಾರಿಗೆ ವ್ಯವಸ್ಥೆಯ ಸೌಕರ್ಯವಿಲ್ಲದೆ ಅಲ್ಲೆ ಉಳಿದಿರಬಹುದು ಮಾಂಸಹಾರಿಗಳಾದ ಲಂಬಾಣಿಗರು ಅವರಿಗೆ ಆಹಾರವಾಗಿ ಕುರಿಯನ್ನು ಕೊಯ್ದು ಪೂರೈಸಿರುತ್ತಾರೆ ಆ ಪದ್ದತಿ ಇತರೆ ಜನಾಂಗಗಳಲ್ಲಿಯಂತೆ ಲಂಬಾಣಿಗರಲ್ಲಿ ಈಗಲೂ ಆಚರಣೆಯಲ್ಲಿದೆ.

ಹೋಳಿ ಆಚರಣೆ, ದವಾಳಿ ಆಚರಣೆ, ತೀಜ್ ಹಬ್ಬ ಇವೆಲ್ಲವೂ ಎಲ್ಲ ಜನಾಂಗದ ಗಿಂತಲೂ ಲಂಬಾಣಿಗರಲ್ಲಿ ಭಿನ್ನವಾಗಿ ಆಚರಿಸಲ್ಪಡುತ್ತವೆ. ತೀಜ್ ಮುಂಗಾರಿನ ಮಳೆ ಬರುವುದಕ್ಕೆ ಮುಂಚೆ ನಡೆಸುವ ಗೋದಿ ಹಬ್ಬವಾಗಿದ್ದು ನೇರವಾಗಿ ಆ ಸಮುದಾಯ ಪ್ರಕೃತಿಯೊಂದಿಗೆ ತಲತಲಾಂತರದಿಂದ ಬೆಸೆದುಕೊಂಡ ಸಂಬಂಧದ ಸೂಚಕ. ಫಲವಂತಿಕೆಯ ಹಬ್ಬವೆಂದರೂ ಸರಿಯೇ. ಇನ್ನು ದವಾಳಿ ಕೂಡಾ ನಿಸರ್ಗ ಕೇಂದ್ರಿತ ಆಚರಣೆ. ಇಲ್ಲಿ ಹೊಸ ವಸ್ತ್ರ ಧರಿಸಿ ಯೌವ್ವನದ ಹುಡುಗಿಯರು ಕಾಡಿಗೆ ಹೋಗಿ ಪುಟ್ಟಿಯಲ್ಲಿ ಬಗೆಬಗೆಯ ಹೂವುಗಳನ್ನು ಕೊಯ್ದು ತರುವ, ಅವರು ಹೊತ್ತ ಪುಟ್ಟಿಯನ್ನು ಅವರನ್ನಿಚ್ಚಿಸುವ ಹುಡುಗರು ಇಳಿಸುವ, ತನಗೆ ಆತ ಒಪ್ಪಿಗೆಯಾಗಿದ್ದರೆ ಹುಡುಗಿ ಸಂತಸದಿಂದ ಪುಟ್ಟಿ ಇಳಿಸಿಕೊಳ್ಳುವ, ಹುಡುಗ ಇಷ್ಟವಿಲ್ಲದಿದ್ದರೆ ಇಳಿಸಲು ನಿರಾಕರಿಸುವ ಸಂಗತಿಗಳು ಲಂಬಾಣಿಗಳಲ್ಲಿ ಹೆಣ್ಣು ಗಂಡುಗಳಿಗೆ ಆಯ್ಕೆ ಮತ್ತು ನಿರಾಕರಣೆಗೆ ಇರುವ ಮುಕ್ತ ಅವಕಾಶಗಳು ಇವೆ. ಹೋಳಿ ಆಚರಣೆಯಲ್ಲಿಯೂ ಕೂಡ ನಾಚ್ ಮಾಡುತ್ತಾ ಹಾಡುವ ಹಾಡುಗಳೂ ಸಹ ಇದೇ ಹಿನ್ನೆಲೆಯವು ಅಲ್ಲಿ ಹೆಣ್ಣು ಮಕ್ತವಾಗಿ ತನ್ನ ವೈವಾಹಿಕ ಬಯಕೆ, ಪ್ರೇಮ, ಶೃಂಗಾರ ಮೊದಲಾದವನ್ನು ಮುಕ್ತವಾಗಿಯೇ ವ್ಯಕ್ತಪಡಿಸುವಳು.

ಕಲೆ ಜಾನಪದ ಸಾಹಿತ್ಯ ಮತ್ತು ಆಚರಣೆಗಳು ಹೀಗೆ ಲಂಬಾಣಿಗರ ಜೀವನದ ಅಂತಃಸ್ಸತ್ವಗಳಾಗಿವೆ. ನಿಲ್ಲದ ನಿರಂತರ ಪಯಣಿಗರಾಗಿ ತಮ್ಮ ವಲಸೆ ಜೀವನದ ಸ್ಥಿತ್ಯಂತರಗಳಲ್ಲಿ ಅನೇಕ ದೇಶ ಭಾಷೆ ಸಂಸ್ಕೃತಿಗಳ ಜನಾಂಗಗಳ ಸಂಪರ್ಕಕ್ಕೆ ಬಂದರೂ ಹಾದು ಹೋದರೂ ಪ್ರತ್ಯೇಕ ಅಸ್ತಿತ್ವವನ್ನು ಕಾಯ್ದುಕೊಂಡು ತನ್ನದೇ ಜೀವನಕ್ರಮ ಧಾರ್ಮಿಕತೆ ನಿಸರ್ಗ ಸ್ನೇಹಿ ಜೀವನವನ್ನು ರೂಢಿಸಿಕೊಂಡು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ತನ್ನದೇ ಪ್ರಾತಿನಿಧ್ಯವನ್ನು ಸಾಧಿಸಿದೆ. ಬಹುಷಃ ಅದರ ಜಂಗಮಶೀಲತೆಯೇ ಅದರೊಳಗೆ ಅನ್ಯ ಸಂಸ್ಕೃತಿ ವೈದಿಕಶಾಹಿ ಪ್ರವೇಶಿಸದಂತೆ ತಡೆದಿದೆ. ಯಾವಾಗ ಆ ಬುಡಕಟ್ಟು ನೆಲೆನಿಂತ ಬುಡಕಟ್ಟುವಾಗಿ ರೂಪುಗೊಂಡಿತೋ ಆಗ ಅದರೊಳಗೆ ಅನ್ಯ ಧರ್ಮ ಸಂಸ್ಕೃತಿ ಆಚರಣೆ ವೈದಿಕ ಪುರೋಹಿತಶಾಹಿಯ ಪ್ರವೇಶ ಆರಂಭವಾಗಿದೆ. ಲಂಬಾಣಿ ಸಂಸ್ಕೃತಿ ಕಲೆ ಜಾನಪದ ಮೌಖಿಕ ಸಾಹಿತ್ಯ ಆಚರಣೆಗಳಲ್ಲಿ ವನ, ವನ್ಯಪ್ರಾಣಿ ಪಕ್ಷಿಗಳ ಕುರಿತು ಜೀವಪರ ಚಿಂತನೆಗಳು ಮಡುಗಟ್ಟಿವೆ. ಇವರ ಜಾನಪದ ಸಾಹಿತ್ಯ ಹಾಡು ಹಸೆ ಹಬ್ಬಗಳಲ್ಲಿ ಜೀವಪರವಾದ ಕಾರುಣ್ಯವನ್ನು ನಿಸರ್ಗಪರವಾದ ವಿವೇಕವನ್ನು ಸೂಸುತ್ತಿದೆ.

**ಉಪಸಂಹಾರ**

ಕಲೆಯೊಳಗೆ ಬದುಕು ಬದುಕಿನೊಳಗೆ ಕಲೆ ಒಂದಕ್ಕೊಂದು ಬಿಡಿಸಲಾರದ ನಂಟಾಗಿ ಲಂಬಾಣಿಗಳ ಸಂಸ್ಕೃತಿಯುದ್ದಕ್ಕೂ ಸಾಗಿ ಬಂದಿದೆ. ಇಂತಹ ಅನನ್ಯ ಬಂಜಾರ ಕಲೆಯು ಬ್ರಾಹ್ಮಣೀಕರಣಕ್ಕೆ ಒಳಗಾಗಿರಯವುದನ್ನು ಕಾಣಬಹುದು. ಲಂಬಾಣಿಗರು ಪ್ರತ್ಯೇಕ ರೂಢಿ ಸಂಪ್ರದಾಯಗಳನ್ನು ಆಹಾರಕ್ರಮ, ಮನೆ ತಾಂಡಾ ಕಟ್ಟಿಕೊಂಡು ನಿಸರ್ಗದ ಮಕ್ಕಳಾಗಿ ಹಿಂದೂ ದೈವ ಧರ್ಮ ಹಬ್ಬಗಳ ಆಚರಣೆ ಆರಾಧನೆಗಳಿಂದಾಚೆ ಸ್ವತಂತ್ರವಾದ ಸಂಸ್ಕೃತಿಯಾಗಿದೆ. ಹೋಳಿ ನಾಚ್, ದವಾಳಿ ನಾಚ್, ತೀಜ್ ನಾಚ್, ಉಡುಗೆ ತೊಡುಗೆಯ ತಯಾರಿಕೆ ಕಸೂತಿ ಹಾಗೂ ಅನೇಕ ಜನಪದ ಹಾಡುಗಳಲ್ಲಿ ಮಹಿಳೆಯೇ ಪ್ರಧಾನಳಾಗಿ ಕಾಣುವಳು. ಲಂಬಾಣಿಗರ ಕಸೂತಿ ಕಲೆ ಉಡುಗೆ ತೊಡುಗೆಗಳು ನೇಪತ್ಯಕ್ಕೆ

ಸರಿಯುತ್ತಿರುವುದರಿಂದ ಆ ವಿಶಿಷ್ಟ ಪದಗಳೂ ವೇಗವಾಗಿ ಮರೆಯಾಗಿ ಗೋರ್ ಭಾಷೆಯ ಶಬ್ಧ ಸಂಪತ್ತು ನಾಶವಾಗುವ ಮೂಲಕ ಆ ಭಾಷೆಯೇ ನಾಶವಾಗಬಹುದಾದ ಸಾಧ್ಯತೆಗಳನ್ನು ಇಲ್ಲಿ ಕಾಣುತ್ತೇವೆ. ಬಡತನವೇ ಹಾಸುಹೊಕ್ಕಾಗಿದ್ದ ಲಂಬಾಣಿಗಳು ಅತ್ಯಂತ ಶ್ರಮಿಕರಾಗಿದ್ದು ಆ ಸಮುದಾಯದ ಸ್ತ್ರೀಯರು ಸುಧೀರ್ಘ ಸಮಯ ಹಿಡಿಯುವ ದುಬಾರಿ ವೆಚ್ಚದ ಕಸೂತಿ ಮತ್ತು ಉಡುಗೆ ತೊಡುಗೆಗಳ ತಯಾರಿಯಲ್ಲಿ ತಾಳ್ಮೆ ಶಾಂತಿ ಮತ್ತು ಕವಿ ಮನಸ್ಸು ಉಳ್ಳವರಾಗಿ, ಪದ ಪದ್ಯಗಳನ್ನು ಕಟ್ಟಿ ಲಂಬಾಣಿ ಸಂಸ್ಕೃತಿಯನ್ನು ಉತ್ತುಂಗಕ್ಕೇರಿಸಿರುವ ಪ್ರತಿಭಾವಂತೆಯರಾಗಿದ್ದಾರೆ.

**ಪರಾಮರ್ಶನ/ಆಕರ ಗ್ರಂಥಗಳು**


- ಇರ್ಫಾನ್ ಹಬೀಬ್. (2005). ಸಿಂಧೂ ನಾಗರೀಕತೆ. ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು.
- ಖಂಡೋಬಾ ಪಿ. ಕೆ. (1988). ಲಂಬಾಣಿ ಸಂಸ್ಕೃತಿ. ತೇಜಸಿಂಗ್ ರಾಠೋಡ ಮೆಮೊರಿಯಲ್ ಟ್ರಸ್ಟ್, ಗುಲಬರ್ಗ.
- ಖಂಡೋಬಾ ಪಿ. ಕೆ. (2002). ಲಂಬಾಣಿ ಗೋತ್ರಗಳು ಮತ್ತು ಶಾಸ್ತ್ರಗಳು. ಸಂಗೀತ ಪ್ರಕಾಶನ, ಗುಲಬರ್ಗ.
- ಪಂಡಿತ ಕೆ. ರಾಠೋಡ. (2015). ಬಂಜಾರ ಸಂಸ್ಕೃತಿ ಕಥನ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಮೇತ್ರಿ ಕೆ. ಎಂ. (ಸಂ.) (2005). ಬುಡ್ಗಜಂಗಮ್ ದರ್ಶಿನಿ. ಕನಾಟಕ ಬುಡ್ಗಜಂಗಮ್ ಸಂಘ, ಹೊಸಪೇಟೆ.
- ಹರಿಲಾಲ ಪವಾರ್. (2007). ಬದುಕೊಂದು ಚಿತ್ತಾರ ಲಂಬಾಣಿ ಬುಡಕಟ್ಟು. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.


IIMRD
JOURNALS